**ಓ.ಎಸ್. ನಂ. 250/2018 ಪಿ.ಡಬ್ಲ್ಯೂ-1 ಹೆಸರು -ಮಹದೇವ ಯಾನೆ ಮಹದೇವಶೆಟ್ಟಿ**

**ಸಾಕ್ಷಿಯನ್ನು ದಿನಾಂಕಃ 04.08.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎನ್ ಯು ವಕೀಲರಿಂದಃ-**

ನಮ್ಮ ವಾಸದ ಮನೆಯ ಪಶ್ಚಿಮಕ್ಕೆ ಗಲ್ಲಿ ಇದ್ದು, ಆ ನಂತರದಲ್ಲಿ ವಾದಿಯರ ಮನೆ ಇದೆ ಎಂದರೆ ಸರಿಯಲ್ಲ. ನಮ್ಮ ಮನೆಯ ಉತ್ತರ ದಿಕ್ಕಿಗೆ ಗಲ್ಲಿ ಇದೆ ಎಂದರೆ ಸರಿಯಲ್ಲ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಬೀದಿ ಇದೆ ಎಂದರೆ ಸರಿ. ನಮ್ಮ ಮನೆಯ ಪೂರ್ವಕ್ಕೆ ಕುಂಟಶೆಟ್ಟಿರವರ ಮನೆ ಇದೆ. ವಾದಿಯ ಮನೆಯ ಪೂರ್ವಕ್ಕೆ ಗಲ್ಲಿ ಇದ್ದು, ಆ ನಂತರದಲ್ಲಿ ನಮಗೆ ಸೇರಿದ ಮನೆ ಇದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ ಸ್ವತ್ತನ್ನು ವಾದಿಯ ತಂದೆ 1953 ರಲ್ಲಿಯೇ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮನೆಯ ದಕ್ಷಿಣಕ್ಕೆ ವಾದಿ ಮನೆ ಇದ್ದು, ಮುಂದಕ್ಕೆ ವಾದಿಯ ಅಣ್ಣನ ಮನೆ ಇದೆ ಎಂದರೆ ಸರಿಯಲ್ಲ. ನಿಡಿ1 ಮತ್ತು 2 ರ ಛಾಯಾ ಚಿತ್ರಗಳಲ್ಲಿರುವ ಮನೆಯಲ್ಲಿ ನಾನು ಈಗ ವಾಸಿಸುತ್ತಿದ್ದೇನೆ ಎಂದರೆ ಸರಿ. ಮನೆಯನ್ನು ನಿರ್ಮಿತಿ ಮಾಡಲು ಪಂಚಾಯಿತಿಯಿಂದ ಪರವಾನಗಿಯನ್ನು ಪಡೆದಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿಲ್ಲ. ನಾನು ಮನೆಯನ್ನು ಕಟ್ಟುವ ಕಾಲಕ್ಕೆ ವಾದಿಯ ಸ್ವತ್ತನ್ನು ಒತ್ತುವರಿ ಮಾಡಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಕಾನೂನು ಬಾಹಿರವಾಗಿ ಮನೆಯನ್ನು ನಿರ್ಮಿತಿ ಮಾಡಿರುವುದರಿಂದ ವಾದಿಯರ ಮನೆಯ ಗಾಳಿ ಮತ್ತು ಬೆಳಕಿಗೆ ತೊಂದರೆಯಾಗುತ್ತಿದೆ ಎಂದರೆ ಸರಿಯಲ್ಲ. ಸದರಿ ಮನೆಯ ಗೋಡೆಯನ್ನು ಕಟ್ಟುವ ವಿಚಾರವಾಗಿ ಗಲಾಟೆಯಾಗಿ ವಾದಿ ನನ್ನ ಮತ್ತು ನನ್ನ ಕುಟುಂಬದವರ ವಿರುದ್ಧ ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದು, ಆ ಕುರಿತು 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ನಂಜನಗೂಡುರವರಲ್ಲಿ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಪಂಚಾಯಿತಿಯಿಂದ ಪರವಾನಗಿಯನ್ನು ಪಡೆಯದೆ ಅಕ್ರಮವಾಗಿ ಮನೆಯನ್ನು ನಿರ್ಮಿತಿ ಮಾಡಿದ್ದು, ಅದರಿಂದ ವಾದಿಗೆ ತೊಂದರೆಯಾಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಸ್ತವಾಂಶಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**